ವಾರದ ಪತ್ರ



## ಕಣ್ತೆರೆಸಬೇಕು ‘ಸಿಂಗ್ ಕನ್ನಡ’

ಝೀ ಕನ್ನಡದ ‘ಸರಿಗಮಪ’ದ ಜೆಸ್ ಕರಣ್ ಸಿಂಗ್ ಎಂಬ ಸ್ಪರ್ಧಿ ತಮ್ಮ ಮಧುರ ಗಾಯನದಿಂದ ವೀಕ್ಷಕರ ಮನಗೆದ್ದಿದ್ದಾರೆ. ‘ಕಳೆದ 50 ವರ್ಷಗಳ ಹಿಂದೆ ವ್ಯಾಪಾರಕ್ಕಾಗಿ ಪಂಜಾಬ್ ತೊರೆದು ಕರ್ನಾಟಕಕ್ಕೆ ಬಂದು ನೆಲೆ ಕಂಡುಕೊಂಡಿದ್ದೇವೆ. ನಮಗೆ ಅನ್ನ, ನೀರು, ಆಶ್ರಯ ಕೊಟ್ಟಿರುವುದು ಕರ್ನಾಟಕ. ಕನ್ನಡವೇ ನಮ್ಮ ಉಸಿರು’ ಎಂದು ಅವರು ಹೇಳಿದರು. ಕರುನಾಡಿನಲ್ಲಿ ನಾವೇ ಅನ್ಯ ನಾಡಿನವರ ಜೊತೆ ಬೇರೆ ಭಾಷೆಯಲ್ಲಿ ಅವರನ್ನು ಮಾತನಾಡಿಸಲು ಯತ್ನಿಸುತ್ತೇವೆ. ನಮ್ಮ ಮನೆ ಮಕ್ಕಳ ಜೊತೆ ಇಂಗ್ಲಿಷ್ ಮಾತನಾಡಲು ಯತ್ನಿಸುತ್ತೇವೆ. ಇದನ್ನು ನೋಡಿದರೆ, ಪಂಜಾಬ್ ಬಂಧುಗಳ ಮಾತುಗಳು ಕನ್ನಡಿಗರ ಕಣ್ತೆರೆಸುವಂತಿತ್ತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಜನಪರ, ಜನಮುಖಿ ಬಾಳುಮಾಮ

ಮರಾಠಿಯಿಂದ ಭಾಷಾಂತರಿಸಿರುವ ‘ಪವಾಡ ಪುರುಷ’ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿದೆ. ಅದು ಇತರೆ ಧಾರಾವಾಹಿಗಳಿಗಿಂತ ವಿಭಿನ್ನ. ದೇವಮಾನವ ಎಂದು ಬಿಂಬಿಸಿರುವ ಬಾಳುಮಾಮ, ಪ್ರಾಣಿ ಮತ್ತು ಪ್ರಕೃತಿ ಬಗ್ಗೆ ಕಾಳಜಿಯನ್ನು ವಹಿಸುತ್ತಾನೆ. ಮೂಕಪ್ರಾಣಿಗಳಿಗೂ ಸಮಬಾಳು ಎಂದು ತನ್ನ ಕುರಿಗಳೊಂದಿಗೆ ಊರಿಂದೂರಿಗೆ ಅಲೆಯುತ್ತಾನೆ. ಸತ್ಯ ಮತ್ತು ನ್ಯಾಯದ ಮಾರ್ಗದಲ್ಲಿ ಪರೋಪಕಾರ ಮಾಡಬೇಕು. ಪಾಂಡುರಂಗನ ಕೃಪೆಗೆ ಪ್ರಾಪ್ತರಾಗಬೇಕು ಎನ್ನುವ ಅಂಶವನ್ನು ಆತ ಸಾರುತ್ತಾನೆ. ತನಗೆ ಎದುರಾಗುವ ದರೋಡೆಕೋರರಿಗೂ ಮನಪರಿವರ್ತನೆ ಮಾಡುತ್ತಾನೆ. ಕದ್ದವರ ಮನೆಗೆ ಹೋಗಿ ಅವರಿಗೆ ತಿಳಿಯದಂತೆ ಅವರ ವಸ್ತುಗಳನ್ನು ಮುಟ್ಟಿಸುವಂತೆ ಹೇಳಿ ಸನ್ಮಾರ್ಗದಲ್ಲಿ ನಡೆಯುವ ಬುದ್ಧಿಯನ್ನು ಹೇಳಿಕೊಡುತ್ತಾನೆ. ಇಂತಹ ಸದಭಿರುಚಿಯ ‘ಪವಾಡ ಪುರುಷ’ ಬೇರೆ ಧಾರಾವಾಹಿಗಳಂತೆ ಮರುಪ್ರಸಾರ ಆಗುತ್ತಿಲ್ಲ ಏಕೆ?

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಶೋಷಣೆ ದಾಟುವುದು ಎಂದು?

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಹಿಂದಿಯಿಂದ ಡಬ್ ಮಾಡಿರುವ ‘ಅನುಪಮ’ ಹೆಸರಿಗನ್ವಯವಾಗಿ ಮೂಡಿಬರುತ್ತಿದೆ. ಹೋಳಿ ಹಬ್ಬದ ಸಂದರ್ಭದಲ್ಲಿ ಕಥಾನಾಯಕಿ ಅನುಪಮ ಗೊತ್ತಿರದೆ ಅಮಲು ಪದಾರ್ಥ ಬೆರೆತ ಹಣ್ಣಿನರಸವನ್ನು ಸೇವಿಸುತ್ತಾಳೆ. ನಂತರ ಅಮಲಿನಲ್ಲಿ ಅತ್ತೆ ಅವಳನ್ನು ನಡೆಸಿಕೊಳ್ಳುತ್ತಿದ್ದ ರೀತಿಗೆ ನೊಂದು ತನ್ನ ವೇದನೆಯನ್ನು ಹೊರಗೆಡವುತ್ತಾಳೆ. ಆಕೆ ಅತ್ತೆಯನ್ನು ಅಮ್ಮನಂತೆ ಭಾವಿಸಿದ್ದಳು. ಅತ್ತೆ, ಸೊಸೆಯನ್ನು ಮಗಳೆಂದು ಭಾವಿಸುತ್ತಿರಲಿಲ್ಲ. ತನಗಾಗುತ್ತಿದ್ದ ನೋವನ್ನು ಹೇಳಿಕೊಳ್ಳುವಾಗ ಮನ ಮಿಡಿಯುತ್ತದೆ. ಮಹಿಳೆ ತನ್ನ ಶೋಷಣೆಯ ಪರಧಿಯನ್ನು ದಾಟುವುದು ಎಂದು ಎನ್ನುವ ಪ್ರಶ್ನೆ ನಿರಂತರ ಕಾಡುತ್ತದೆ.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## ಭಾವಪರವಶ ಕ್ಷಣಗಳು

ಝೀ ಕನ್ನಡದ ‘ಡ್ರಾಮಾ ಜೂನಿಯರ್ಸ್’ನ ಪುಟ್ಟಮಕ್ಕಳ ಅಭಿನಯ ಮನಸಿಗೆ ಹತ್ತಿರವಾಗುತ್ತದೆ. ಇತ್ತೀಚಿನ ಸಂಚಿಕೆಯೊಂದರ ಪ್ರಸಂಗದಲ್ಲಿ, ನಾಯಕನ ತಾಯಿ ಮರೆವಿನ ಕಾಯಿಲೆಗೆ ತುತ್ತಾಗುತ್ತಾರೆ. ಆಗ ಮಗ ಸರಪಳಿಯಿಂದ ಬಂಧಿಸಿ ಕೆಟ್ಟದಾಗಿ ಕಾಣುತ್ತಾನೆ. ನಂತರ ನರ್ಸ್ ನೇಮಿಸುತ್ತಾನೆ. ದಾದಿಯ ಸಹೃದಯ ಸೇವೆಯಿಂದ ಅವಳ ನೆನಪು ಮರುಕಳಿಸಿ ಮಗನನ್ನು ಅಪ್ಪಿಕೊಂಡು ಪ್ರೀತಿಯಿಂದ ತುತ್ತು ತಿನ್ನಿಸುತ್ತಾಳೆ. ಮಗನಿಗೆ ತನ್ನ ತಪ್ಪು ಅರಿವಾಗಿ ಬಿಕ್ಕಿ ಬಿಕ್ಕಿ ಅಳುತ್ತಾ ಕ್ಷಮೆ ಕೋರುತ್ತಾನೆ. ವಯಸ್ಸಾದ ಅಪ್ಪ–ಅಮ್ಮನನ್ನು ಪ್ರೀತಿಯಿಂದ ನೋಡಿಕೊಳ್ಳಬೇಕೆಂಬ ಸಂದೇಶವನ್ನು ನೀಡಿತು.

‘ಸರಿಗಮಪ’ ಸಂಗೀತ ಕಾರ್ಯಕ್ರಮದ ‘ಡೆಡಿಕೇಷನ್ ರೌಂಡ್’ನಲ್ಲಿ ಅಪ್ಪ ಅಮ್ಮನಿಗೆ ಅರ್ಪಿಸುವ ಹಾಡುಗಳನ್ನು ಗಾಯಕರು ಹಾಡಿ ರಂಜಿಸಿದರು. ಗಾಯಕರ ಆ ಹಾಡುಗಳಿಗೆ ಮಾತು ಬರದ ಮೂಕ ವಿದ್ಯಾರ್ಥಿಗಳು ತಮ್ಮ ಆಂಗಿಕ ಭಾಷೆಯಲ್ಲಿ ಸ್ಪಂದಿಸಿದ ಕ್ಷಣ ಭಾವಪರವಶ ಮಾಡಿತು.

—ಭಾರತೀ ಗಂಗಾಧರ್, ಬೆಂಗಳೂರು

## ಹೆಚ್ಚಲಿ ಸನ್ಮಾರ್ಗದ ಕಥನಗಳು

ಸ್ಟಾರ್ ಸುವರ್ಣದ ‘ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ’ ಚೆನ್ನಾಗಿ ಮೂಡಿಬರುತ್ತಿದೆ. ಸತ್ಯವಂತರನ್ನು ಪರಮಾತ್ಮ ಯಾವತ್ತೂ ಕೈ ಬಿಡಲಾರ ಎಂಬ ಸಂದೇಶ ಸಾರುತ್ತದೆ. ಪರಮೇಶ್ವರನ ಜ್ಞಾನದಿಂದ ಸಿದ್ಧಲಿಂಗೇಶ್ವರರ ಎಲ್ಲ ಕಷ್ಟಗಳು ದೂರ ಆಗುತ್ತವೆ. ಇದನ್ನು ಸರಳವಾಗಿ ಪ್ರೇಕ್ಷಕರಿಗೆ ದಾಟಿಸುವ ಕೆಲಸವನ್ನು ಇಲ್ಲಿ ಮಾಡಿದ್ದಾರೆ. ‘ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ’ ಸಹ ಅಷ್ಟೇ ಚೆನ್ನಾಗಿ ಮೂಡಿಬಂದಿದೆ. ಇಂಥ ಆಧ್ಯಾತ್ಮಿಕ, ಸನ್ಮಾರ್ಗದ ಧಾರಾವಾಹಿಗಳು ಹೆಚ್ಚು ಮೂಡಿಬರಲಿ.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ಕೋವಿಡ್: ಮಾಧ್ಯಮಗಳು ಸಂಯಮ ಪಾಲಿಸಲಿ

ಕೋವಿಡ್ ನಾಲ್ಕನೇ ಅಲೆ ಮಾಧ್ಯಮಗಳಲ್ಲಿ ಆಗಾಗ ದೊಡ್ಡದಾಗಿ ಬಿಂಬಿತವಾಗುತ್ತಿದೆ. ಸುದ್ದಿ ವಾಹಿನಿಗಳ ಈಗಿನ ಕವರೇಜ್ ನೋಡಿದರೆ, ಹಳೆಯ ಚಾಳಿಯನ್ನು ಬಿಟ್ಟಂತೆ ಕಾಣುವುದಿಲ್ಲ. ವಾಹಿನಿಗಳು ತಮ್ಮ ಅಬ್ಬರದ ಹಾದಿಯನ್ನು ಬಿಟ್ಟು, ಕೋವಿಡ್ ರೋಗದ ಬಗ್ಗೆ ಮಾಹಿತಿ ನೀಡುವಂತೆ ಆಗಲಿ. ಮುಂಜಾಗ್ರತಾ ಕ್ರಮಗಳನ್ನೂ ನೀಡಲಿ. ಯಾವುದೇ ಕಾರಣಕ್ಕೂ ಜನರಿಗೆ ಭಯ ಹುಟ್ಟಿಸುವಂತೆ ಕಾರ್ಯಕ್ರಮ ರೂಪಿಸುವ ಅಗತ್ಯ ಇಲ್ಲ. ಸುದ್ದಿ ನೀಡುವಾಗ ಉಪಮೆ, ರೂಪಕವನ್ನು ಬಳಸುವಾಗ ಸಂಯಮ ಪಾಲಿಸಲಿ.

—ರಮಾನಂದ ಶರ್ಮಾ, ಬೆಂಗಳೂರು

## ಬಿಗ್ ಬಾಸ್‌ಗೆ ವಿಚಿತ್ರ ತಿರುವು

ಕಲರ್ಸ್ ಕನ್ನಡದ ‘ಬಿಗ್ ಬಾಸ್’ ರಿಯಾಲಿಟಿ ಶೋ ದಿನ ಕಳೆದಂತೆ ವಿಚಿತ್ರ ತಿರುವನ್ನು ಪಡೆಯುತ್ತಿದೆ. ಹಿಂದಿನ ಶೋಗಳಿಗೆ ಹೋಲಿಸಿದರೆ ಈ ಬಾರಿ ಸದಭಿರುಚಿ, ರಂಜನೆಯ ಪ್ರಮಾಣ ಕಡಿಮೆಯಾಗಿದೆ. ಆದರೆ ಸಾಮಾಜಿಕ ಮಾಧ್ಯಮಗಳ ಕಾರಣಕ್ಕೆ ಹೆಚ್ಚು ಜನಪ್ರಿಯ ಕೂಡ ಆಗಿದೆ. ಬಿಗ್ ಬಾಸ್ ಮನೆಗೆ ಬಂದ ಸ್ಪರ್ಧಿಗಳ ಕುಟುಂಬ ವರ್ಗದಲ್ಲಿ ಕೆಲವರ ನಡವಳಿಕೆ ನಾಟಕೀಯವಾಗಿತ್ತು.

ಸಿರಿ ಅವರ ಮನೆಯ ಎಲ್ಲರೂ ಚೆನ್ನಾಗಿ ಆಟ ಆಡಿ ಎಂದು ಹರಸಿದರು. ಜೊತೆಗೆ ಒಂದು ವಿಶೇಷ ಆಶಯವನ್ನು ವ್ಯಕ್ತಪಡಿಸಿದರು. ನಾಲ್ವರು ಮಹಿಳೆಯರಿದ್ದೀರಿ, ಈ ಬಾರಿ ನಿಮ್ಮಲ್ಲಿ ಒಬ್ಬರು ಕಪ್ ಹಿಡಿಯಬೇಕು ಎಂದಿದ್ದು ಮಾತ್ರ ಇಷ್ಟವಾಯಿತು. ನನಗೂ ಹಾಗೇ ಅನಿಸುತ್ತಿದೆ.

—ಹರ್ಷ, ಬೆಂಗಳೂರು